ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/06/ಎಲ್ಆರ್‌ಡಿಸಿ/2017-18 /2974

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ: 08-02-2018.

**-:ಸುತ್ತೋಲೆ:-**

ವಿಷಯ: 2017-18 ನೇ ಸಾಲಿನ "41ನೇ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟ" ದಲ್ಲಿ ಪಾಲ್ಗೊಳ್ಳುವ ಬಗ್ಗೆ.

ಉಲ್ಲೇಖ: ದಿನಾಂಕ: 04-02-2018 ರಂದು ನಿರ್ದೇಶಕರ ಕೊಠಡಿಯಲ್ಲಿ ನಡೆದ ಕೇಂದ್ರ ಕ್ರೀಡಾ ಸಮಿತಿ ಸಭೆಯ ನಡವಳಿಗಳು.

((((()))))

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2017-18 ನೇ ಸಾಲಿನ "41 ನೇ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟ" ವನ್ನು ದಿನಾಂಕ: 17-02-2018 ಮತ್ತು 18-02-2018 ರಂದು ಆಚಾರ್ಯ ಪಾಲಿಟೆಕ್ನಿಕ್, ಸೋಲದೇವನಹಳ್ಳಿ, ಬೆಂಗಳೂರು, ಇಲ್ಲಿ ನಿರ್ದೇಶನಾಲಯದ ಸಹಯೋಗದೊಂದಿಗೆ ಆಯೋಜಿಸಲಾಗುತ್ತಿದ್ದು, ಸದರಿ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳು ಮತ್ತು ವ್ಯವಸ್ಥಾಪಕರುಗಳು **ದಿನಾಂಕ:16.02.2018 ರಂದು ಸಂಜೆ 4.00 ಗಂಟೆ** ಯೊಳಗಾಗಿ ಪ್ರಾಂಶುಪಾಲರು ಆಚಾರ್ಯ ಪಾಲಿಟೆಕ್ನಿಕ್, ಬೆಂಗಳೂರು, ಇಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ, ಎಲ್ಲಾ ಕ್ರೀಡಾಪಟುಗಳು ಕಡ್ಡಾಯವಾಗಿ **ವೈದ್ಯಕೀಯ ಪ್ರಮಾಣ ಪತ್ರವನ್ನು** ವರದಿ ಮಾಡಿಕೊಳ್ಳುವ ಸಮಯದಲ್ಲಿ ಹಾಜರುಪಡಿಸುವುದು. ಮುಂದುವರಿದು ವ್ಯವಸ್ಥಾಪಕರುಗಳು ವರದಿ ಮಾಡಿಕೊಳ್ಳುವ ಸಮಯದಲ್ಲಿ ಮರಳಿಪಡೆಯುವ ಠೇವಣಿ ರೂ.500.00 ಗಳನ್ನು ಜಮ ಮಾಡಲು ಸೂಚಿಸಲಾಗಿದೆ, ಸರ್ಕಾರಿ ಮತ್ತು ಅನುದಾನಿತ ಸಂಸ್ಥೆಯವರು ವೈದ್ಯಕೀಯ ಪ್ರಮಾಣ ಪತ್ರದ ವೆಚ್ಚ ಮತ್ತು ಠೇವಣಿಯ ಹಣವನ್ನು ಕ್ರೀಡಾಶುಲ್ಕದಿಂದ ಭರಿಸಬಹುದಾಗಿದೆ, ಒಂದು ಸಂಸ್ಥೆಯಿಂದ ಒಬ್ಬ ಸಿಬ್ಬಂದಿಯವರಿಗೆ ಮಾತ್ರ ವಸತಿ ವ್ಯವಸ್ಥೆಯನ್ನು ನೀಡಲಾಗುವುದು, ಸುರಕ್ಷತೆಯ ದೃಷ್ಟಿಯಿಂದ ತಮ್ಮ ಸಂಸ್ಥೆಯ ಕ್ರೀಡಾಪಟುಗಳಿಗೆ ನೀಡುವ ಕೊಠಡಿಗೆ ಬೀಗ ಹಾಕಿಕೊಳ್ಳಲು ಒಂದು ಬೀಗವನ್ನು ತರಲು ಸಹ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು(ಸಿಡಿಸಿ)
8/2/18

ಇವರಿಗೆ:

1. ರಾಜ್ಯದ ಎಲ್ಲಾ ಸರ್ಕಾರಿ/ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ ಮಾಹಿತಿಗಗಿ ಮತ್ತು ಸೂಕ್ತ ಕ್ರಮಕ್ಕಾಗಿ.
2. ಇ-ಗೌರ್ವನೆನ್ಸ್ ವಿಭಾಗಕ್ಕೆ ಇಲಾಖಾ ವೆಬ್ ಸೈಟ್ ನಲ್ಲಿ ಪ್ರಚುರಪಡಿಸುವುದು.